ಮಾತನ್ನು ಹೇಳುತ್ತಾ, ನಿಮಗೆ ಶುಭ ಹಾರೈಸುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಇನ್ನೂ ಮೂವರು ಮಾತನಾಡುವವರಿದ್ದೀರಿ, ದಯವಿಟ್ಟು ಕ್ಷಮಿಸಿ. ಈಗಾಗಲೇ ಸಮಯವಾಗಿರುವುದರಿಂದ ಮುಕ್ತಾಯಗೊಳಿಸುತ್ತಿದ್ದೇನೆ.

3. ಪ್ರಕಟಣೆ

1. ವಿಷಯ :– ಜನತಾದಳ (ಜಾತ್ಯಾತೀತ) ಪಕ್ಷವನ್ನು ಅಧಿಕೃತ ವಿರೋಧ ಪಕ್ಷವೆಂದು ಹಾಗೂ ಶ್ರೀ.ಹೆಚ್.ಡಿ ಕುಮಾರಸ್ವಾಮಿಯವರನ್ನು ವಿರೋಧ ಪಕ್ಷದ ನಾಯಕರೆಂದು ಮಾನ್ಯತೆ ನೀಡುವ ಬಗ್ಗೆ.

ಅಧ್ಯಕ್ಷರು :– ಜನತಾದಳ(ಜಾತ್ಯಾತೀತ) ಪಕ್ಷದ ಕಾರ್ಯಾಧ್ಯಕ್ಷರಾದ ಶ್ರೀ ಪಿ.ಜಿ.ಆರ್.ಸಿಂಧ್ಯ ಅವರು ದಿನಾಂಕ:30–05–2013 ರಂದು ಪತ್ರವನ್ನು ನೀಡಿದ್ದು, ಸದರಿ ಪತ್ರದಲ್ಲಿ ದಿನಾಂಕ:20–05–2013ರಂದು ನಡೆದ ಜನತಾದಳ (ಜಾತ್ಯಾತೀತ) ಶಾಸಕಾಂಗ ಪಕ್ಷದ ಸಭೆಯಲ್ಲಿ ಶ್ರೀ ಹೆಚ್.ಡಿ ಕುಮಾರಸ್ವಾಮಿ ಇವರನ್ನು ಶಾಸಕಾಂಗ ಪಕ್ಷದ ನಾಯಕನನ್ನಾಗಿ ಸರ್ವಾನುಮತದಿಂದ ಆಯ್ಕೆ ಮಾಡಿರುತ್ತಾರೆಂದು ತಿಳಿಸಿ ನಿರ್ಣಯದ ಪ್ರತಿಯನ್ನು ಲಗತ್ತಿಸಿರುತ್ತಾರೆ.

ದಿನಾಂಕ 05ನೇ ಮೇ, 2013 ರಂದು ರಾಜ್ಯ ವಿಧಾನಸಭೆಗೆ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ ಜನತಾದಳ (ಜಾತ್ಯಾತೀತ) ಪಕ್ಷವು 40 ಸ್ಥಾನಗಳನ್ನು ಮತ್ತು ಭಾರತೀಯ ಜನತಾ ಪಕ್ಷವು ಸಹ 40 ಸ್ಥಾನಗಳನ್ನು ಪಡೆಯುವುದರ ಮೂಲಕ ಸಮಬಲದ ವಿರೋಧ ಪಕ್ಷಗಳಾಗಿರುತ್ತವೆ.

ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಗಳ ನಿಯಮಾವಳಿ ನಿಯಮ 2(2)ರಲ್ಲಿ ಈ ಕೆಳಗೆಕಾಣಿಸಿದಂತಿದೆ.

" **ಒಂದಕ್ಕಿಂತ ಹೆಚ್ಚು ಪಕ್ಷ ಅಷ್ಟೇ ಸಂಖ್ಯೆಯ ಸದಸ್ಯರನ್ನು ಹೊದಿದ್ದು, ಮಾನ್ಯತೆಗಾಗಿ ಸ್ಪರ್ಧೆಯಿದ್ದರೆ, ಸಾರ್ವತ್ರಿಕ ಚುನಾವಣೆಯಲ್ಲಿ ಪ್ರತಿಯೊಂದು ತಂಡದ ಸದಸ್ಯರು ಪಡೆದ ಮತಗಳ ಸಂಖ್ಯೆಯನ್ನು ಲೆಕ್ಕಹಾಕತಕ್ಕದ್ದು, ಮತ್ತು ಹೆಚ್ಚಿನ ಸಂಖ್ಯೆಯ ಮತವನ್ನು ಪಡೆದ ತಂಡಕ್ಕೆ ಅಧಿಕೃತ ಪಕ್ಷವೆಂದು ಮತ್ತು ಅದರ ನಾಯಕನನ್ನು ವಿರೋಧ ಪಕ್ಷದ ನಾಯಕನೆಂದು ಮಾನ್ಯತೆ ನೀಡತಕ್ಕದ್ದು**" ಎಂಬುದಾಗಿದೆ.

ಸಾರ್ವತ್ರಿಕ ಚುನಾವಣೆಯಲ್ಲಿ ಜನತಾದಳ (ಜಾತ್ಯಾತೀತ) ಪಕ್ಷದ ಸದಸ್ಯರುಗಳು ಒಟ್ಟು 25,23,283 ಮತಗಳನ್ನು ಪಡೆದಿದ್ದು, ಭಾರತೀಯ ಜನತಾದಳ ಪಕ್ಷದ ಸದಸ್ಯರುಗಳು ಒಟ್ಟು 21,77,062 ಮತಗಳನ್ನು ಪಡೆದಿರುತ್ತಾರೆ.

ಆದುದರಿಂದ, ಜನತಾದಳ (ಜಾತ್ಯಾತೀತ) ಪಕ್ಷದ ತಂಡವು ಅತೀ ಹೆಚ್ಚುಶೇಕಡವಾರು ಮತಗಳನ್ನು ಪಡೆದಿರುವ ಹಿನ್ನೆಲೆಯಲ್ಲಿ, ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಗಳ ನಿಯಮಾವಳಿ ನಿಯಮ 2(2) ರನ್ವಯ ಜನತಾದಳ (ಜಾತ್ಯಾತೀತ) ಪಕ್ಷವನ್ನು ಅಧಿಕೃತ ವಿರೋಧಪಕ್ಷವೆಂದು ಹಾಗೂ ಶ್ರೀ.ಹೆಚ್.ಡಿ ಕುಮಾರಸ್ವಾಮಿ ಅವರನ್ನು ವಿರೋಧ ಪಕ್ಷದ ನಾಯಕರೆಂದು ಮಾನ್ಯತೆ ನೀಡಲಾಗಿದೆ.

2. ವಿಷಯ :– ಭಾರತೀಯ ಜನತಾ ಪಕ್ಷದ ಶಾಸಕಾಂಗ ಪಕ್ಷದ ನಾಯಕರಾಗಿ ಶ್ರೀ. ಜಗದೀಶ್ ಶೆಟ್ಟರ್‌ರವರು ನೇಮಕಗೊಂಡಿರುವ ಬಗ್ಗೆ.

ಭಾರತೀಯ ಜನತಾ ಪಕ್ಷದ ರಾಜ್ಯಾಧ್ಯಕ್ಷರಾದ ಶ್ರೀ ಪ್ರಹ್ಲಾದ್ ಜೋಶಿ ಅವರು ದಿನಾಂಕ:14–05–2013 ರಂದು ಪತ್ರ ನೀಡಿದ್ದು, ಸದರಿ ಪತ್ರದಲ್ಲಿ ದಿನಾಂಕ:14–05–2013 ರಂದು ಭಾರತೀಯ ಜನತಾ ಪಕ್ಷದ ಸಭೆಯಲ್ಲಿ ಶ್ರೀ ಜಗದೀಶ್ ಶೆಟ್ಟರ್ ಅವರನ್ನು ಶಾಸಕಾಂಗ ಪಕ್ಷದ ನಾಯಕರನ್ನಾಗಿ ಸರ್ವಾನುಮತದಿಂದ ಆಯ್ಕೆ ಮಾಡಲಾಗಿರುತ್ತದೆಂದು ತಿಳಿಸಿರುತ್ತಾರೆ. ಅಲ್ಲದೆ ಆ ಬಗ್ಗೆ ಅಂಗೀಕರಿಸಲಾದ ನಿರ್ಣಯದ ಪ್ರತಿಯನ್ನು ಸಹ ಲಗತ್ತಿಸಿರುತ್ತಾರೆ.

ದಿನಾಂಕ: 21–05–2013 ರಂದು ಭಾರತೀಯ ಜನತಾ ಪಕ್ಷದ ನಾಯಕರಾದ ಶ್ರೀ ಜಗದೀಶ್ ಶೆಟ್ಟರ್ ಅವರು ಪತ್ರವನ್ನು ನೀಡಿದ್ದು, ಸದರಿ ಪತ್ರದಲ್ಲಿ ದಿನಾಂಕ: 14–05–2013 ರಂದು ಭಾರತೀಯ ಜನತಾ ಪಕ್ಷದ ಸಭೆಯಲ್ಲಿ ಶ್ರೀ ಆರ್.ಅಶೋಕ ಅವರನ್ನು ಉಪನಾಯಕನನ್ನಾಗಿ ಸರ್ವಾನುಮತದಿಂದ ಆಯ್ಕೆ ಮಾಡಲಾಗಿರುತ್ತದೆಂದು ತಿಳಿಸಿರುತ್ತಾರೆ.

ಆದುದರಿಂದ, ಶ್ರೀ ಜಗದೀಶ್ ಶೆಟ್ಟರ್ ಅವರು ಭಾರತೀಯ ಜನತಾ ಪಕ್ಷದ ಶಾಸಕಾಂಗ ಪಕ್ಷದ ನಾಯಕರಾಗಿ ಮತ್ತು ಶ್ರೀ ಆರ್. ಅಶೋಕ ಅವರು ಸದರಿ ಪಕ್ಷದ ಉಪನಾಯಕರಾಗಿರುತ್ತಾರೆಂದು ಈ ಮೂಲಕ ತಿಳಿಸಲಾಗಿದೆ.

3. ವಿಷಯ :– ಕರ್ನಾಟಕ ಜನತಾ ಪಕ್ಷದ ನಾಯಕರಾಗಿ ಶ್ರೀ ಬಿ.ಎಸ್.ಯಡಿಯೂರಪ್ಪರವರು ನೇಮಕಗೊಂಡಿರುವ ಬಗ್ಗೆ.

ಕರ್ನಾಟಕ ಜನತಾ ಪಕ್ಷದ ರಾಜ್ಯಾಧ್ಯಕ್ಷರಾದ ಶ್ರೀ ಬಿ.ಎಸ್.ಯಡಿಯೂರಪ್ಪ ಅವರು ದಿನಾಂಕ:29–05–2013 ರಂದು ಪತ್ರವನ್ನು ನೀಡಿದ್ದು, ಸದರಿ ಪತ್ರದಲ್ಲಿ ದಿನಾಂಕ:29–05–2013 ರಂದು ಕರ್ನಾಟಕ ಜನತಾ ಪಕ್ಷದ ಸಭೆಯಲ್ಲಿ ಶ್ರೀ ಬಿ.ಎಸ್.ಯಡಿಯೂರಪ್ಪ ಅವರನ್ನು ಶಾಸಕಾಂಗ ಪಕ್ಷದ ನಾಯಕರನ್ನಾಗಿ ಮತ್ತು ಶ್ರೀ ಬಿ.ಆರ್.ಪಾಟೀಲ ಅವರನ್ನು ಉಪನಾಯಕರನ್ನಾಗಿ ಸರ್ವಾನುಮತದಿಂದ ಆಯ್ಕೆ ಮಾಡಿರುತ್ತಾರೆಂದು ತಿಳಿಸಿರುತ್ತಾರೆ.

ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮಾವಳಿಗಳ ನಿಯಮ 2(2)ರ ರೀತ್ಯಾ ಕರ್ನಾಟಕ ಜನತಾ ಪಕ್ಷದಲ್ಲಿ ಆರು ಜನ ಸದಸ್ಯರಿದ್ದು, ಅವರನ್ನು ವಿಧಾನಸಭೆಯ ತಂಡ ಎಂದು ಮಾನ್ಯತೆ ನೀಡಿದ್ದು, ಶ್ರೀ ಬಿ.ಎಸ್.ಯಡಿಯೂರಪ್ಪ ಅವರು ಸದನದಲ್ಲಿ ಆ ತಂಡದ ನಾಯಕರಾಗಿ ಮತ್ತು ಶ್ರೀ ಬಿ.ಆರ್.ಪಾಟೀಲ ಅವರು ಉಪನಾಯಕರಾಗಿ ಕಾರ್ಯನಿರ್ವಹಿಸಲಿರುತ್ತಾರೆಂದು ಈ ಮೂಲಕ ತಿಳಿಸಲಾಗಿದೆ.

ಅಧ್ಯಕ್ಷರು : ಸನ್ಮಾನ್ಯ ಸದನದ ನಾಯಕರೇ, ಸನ್ಮಾನ್ಯ ವಿರೋಧಪಕ್ಷದ ನಾಯಕರೆ, ಗೌರವಾನ್ವಿತ ಸದಸ್ಯರೆ ತಾವೆಲ್ಲರೂ ಅತ್ಯಂತ ಅಭಿಮಾನದಿಂದ, ಸದ್ಭಾವನೆಯಿಂದ ಹಾಗೂ ಅಪಾರ ವಿಶ್ವಾಸದಿಂದ ನನ್ನನ್ನು, ಪ್ರಜಾಪ್ರಭುತ್ವವನ್ನು ಸಾರುವ ವಜ್ರ ಮಹೋತ್ಸವನ್ನು ಆಚರಿಸಿಕೊಂಡಿರುವ ರಾಜ್ಯದ ಶಾಸನ ಸಭೆಯ ಉನ್ನತ ಹಾಗೂ ಗೌರವಾನ್ವಿತ ಪದವಿಯಾದ 14ನೇ ವಿಧಾನಸಭೆಯ ಅಧ್ಯಕ್ಷ ಸ್ಥಾನಕ್ಕೆ ಸರ್ವಾನುಮತದಿಂದ ನನ್ನನ್ನು ಆಯ್ಕೆ ಮಾಡಿರುವುದಕ್ಕೆ ನನ್ನ ಅನಂತ ಧನ್ಯವಾದಗಳನ್ನು ತಿಳಿಸುತ್ತಿದ್ದೇನೆ. ಆಡಳಿತ ಪಕ್ಷದ ಮತ್ತು ವಿರೋಧ ಪಕ್ಷದ ಎಲ್ಲಾ ಹಿರಿಯ ಸದಸ್ಯರು ಅಭಿನಂದನೆಗಳನ್ನು ಸಲ್ಲಿಸಿದ್ದೀರಿ, ತಮ್ಮ ಭಾವನೆಗಳನ್ನು ವ್ಯಕ್ತಪಡಿಸಿದ್ದೀರಿ, ಈ ಸರ್ವಾನುಮತದ ಆಯ್ಕೆಗೆ ಕಾರಣರಾಗಿ–ರುವ ಮಾನ್ಯ ಮುಖ್ಯ ಮಂತ್ರಿಗಳಿಗೆ, ವಿರೋಧ ಪಕ್ಷದ ನಾಯಕರಿಗೆ, ಸಚಿವ ಸಂಪುಟದ ಸದಸ್ಯರಿಗೆ ಮತ್ತು ವಿವಿಧ ಪಕ್ಷದ ನಾಯಕರುಗಳಿಗೆ ನನ್ನ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇನೆ. ನಾನು ಈ ಸದನದ 19ನೇ ಅಧ್ಯಕ್ಷನಾಗಿದ್ದು, ನನ್ನ ಪೂರ್ವದಲ್ಲಿ ಕೆಲಸ ಮಾಡಿರುವ ಎಲ್ಲಾ ಅಧ್ಯಕ್ಷರ ಕೊಡುಗೆಗಳನ್ನು ಸ್ಮರಿಸಬಯಸುತ್ತೇನೆ. ರಾಷ್ಟ್ರದ ಅತ್ಯುನ್ನತ ಸಂವಿಧಾನ ಬುನಾದಿಯಾದ ಸಂಸತ್ತಿನಲ್ಲಿ ಉತ್ತಮ ಸಂಸದೀಯರಾದಂತಹ ಅತ್ಯಂತ ಮೇಧಾವಿಗಳು, ಸಂವಿಧಾನ ಪರಿಣಿತರಾದ ಶ್ರೀ ವಿಠ್ಠಲ್ ಬಾಯಿ ಪಟೇಲ್ ರವರು ಹಾಗೂ ಲೋಕಸಭೆಯ ಪ್ರಥಮ ಅಧ್ಯಕ್ಷರಾದ ಶ್ರೀ ಮಾವಳಕರ್ ಅವರು ಅಧ್ಯಕ್ಷ ಪೀಠವನ್ನು ಅಲಂಕರಿಸಿ ಕೀರ್ತಿ, ಶ್ರೇಷ್ಠತೆಗಳೊಂದಿಗೆ ಕಲಾಪಗಳನ್ನು ಸಮರ್ಪಕವಾಗಿ ನಿರ್ವಹಿಸಿ ಒಳ್ಳೆಯ ಪರಂಪರೆಯನ್ನು ನೀಡಿ ಮಾರ್ಗದರ್ಶನವನ್ನು ನೀಡಿರುತ್ತಾರೆ. ಅವರುಗಳ ಮಾರ್ಗದರ್ಶನ ನಮಗೆಲ್ಲಾ ದಾರಿದೀಪವಾಗಿದೆ. ಈ ಸದನದ ಸದಸ್ಯನಾಗಿ ಹಿಂದೆ ಸಚಿವ ಸಂಪುಟದಲ್ಲಿ ವಿವಿಧ ಖಾತೆಗಳನ್ನು ನಿರ್ವಹಿಸಿರುವ ಹಾಗೂ ವಿಧಾನಪರಿಷತ್ ಸದಸ್ಯನಾಗಿ ಕಾರ್ಯನಿರ್ವಹಿಸಿ ಪಡೆದಿರುವ ಅನುಭವದಿಂದ ಹಾಗೂ ತಮ್ಮೆಲ್ಲರ ಸಹಕಾರದಿಂದ ನನಗೆ ವಹಿಸಿಕೊಟ್ಟಿರುವ ಜವಾಬ್ದಾರಿಯನ್ನು ನಿಷ್ಠೆಯಿಂದ

ಮಾಡುತ್ತೇನೆಂಬ ಭರವಸೆಯನ್ನು ನೀಡುತ್ತೇನೆ. ಸದನದ ಗೌರವ, ಅದರ ಶ್ರೇಷ್ಠತೆ, ಹಿಮದಿನ ಗೌರವಾನ್ವಿತ ಸದಸ್ಯರುಗಳು ನಡೆಸಿಕೊಂಡು ಬಂದಿರುವ ಪರಂಪರೆ ಹಾಗೂ ಸತ್ಸ-ಸಂಪ್ರದಾಯಗಳನ್ನು ಕಾಪಾಡಿಕೊಂಡು ಹೋಗುವ ಜವಾಬ್ದಾರಿ ನಮ್ಮೆಲ್ಲರ ಮೇಲೆದೆ. ಈ ಶಾಸನ ಸಭೆಯಲ್ಲಿ ಜನಸಾಮಾನ್ಯರ ಕುಂದುಕೊರತೆಗಳಿಗೆ ಸ್ಪಂದಿಸಿ ಅನುಕೂಲತೆ ಕಲ್ಪಿಸಲು ಅವಕಾಶ ಒದಗಿಸುವ ಪ್ರಶ್ನೋತ್ತರ ವೇಳೆ, ಸಾರ್ವಜನಿಕ ಮಹತ್ವದ ವಿಷಯಗಳ ಮೇಲೆ ಚರ್ಚೆ, ಶಾಸನ ರಚನೆಗಳು ಬಹಳ ಪ್ರಮುಖವಾದುದೆಂದು ನಾನು ಭಾವಿಸುತ್ತೇನೆ. ಹಿಂದಿನ ಅನೇಕ ಧೀಮಂತ ನಾಯಕರು ಹಾಗೂ ಮೇಧಾವಿಗಳಾಗಿದ್ದ ಅಧ್ಯಕ್ಷರುಗಳು ಈ ಶಾಸನ ಸಭೆಯ ಚುಕ್ಕಾಣಿಯನ್ನು ಹಿಡಿದು ಬಹಳ ಸಮರ್ಪಕವಾಗಿ, ಶಿಸ್ತಿನಿಂದ, ತಮ್ಮ ಕರ್ತವ್ಯವನ್ನು ನಿರ್ವಹಿಸಿರುತ್ತಾರೆ. ಈ ಸಭೆಯ ಅದೇ ಮಾದರಿಯಲ್ಲಿ ಅವರುಗಳು ಹಾಕಿಕೊಟ್ಟಿರುವ ಮೇಲ್ಪಂಕ್ತಿ, ಶಾಸನ ಸಭೆಯ ಪರಂಪರೆ ಮತ್ತು ಸಂಪ್ರದಾಯಗಳನ್ನು ಮುಂದುವರೆಸಿಕೊಂಡು ಹೋಗುವ ಜವಾಬ್ದಾರಿ ನನ್ನದಾಗಿದ್ದು, ಇದಕ್ಕೆ ತಾವೆಲ್ಲರೂ ಸಹಕರಿಸಬೇಕೆಂದು ಕೋರುತ್ತೇನೆ. ಶಾಸಕಾಂಗದ ಘನತೆಯನ್ನು ಎತ್ತಿ ಹಿಡಿಯುವುದು ಹಾಗೂ ಮುನ್ನಡೆಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ಪ್ರಸ್ತುತ ಈ ವಿಧಾನಸಭೆಗೆ ಮೊದಲ ಬಾರಿಗೆ ಚುನಾಯಿತರಾಗಿರುವ ಸದಸ್ಯರುಗಳಿಗಿಂತ, ಎರಡು ಹಾಗೂ ಅದಕ್ಕಿಂತಲೂ ಹೆಚ್ಚಿನ ಬಾರಿ ಚುನಾಯಿತರಾಗಿರುವ ಅನುಭವಿ ಶಾಸಕರುಗಳು ಹೆಚ್ಚಿನ ಸಂಖ್ಯೆಯಲ್ಲಿರುವುದರಿಂದ ನನ್ನ ಕರ್ತವ್ಯವನ್ನು ನಿರ್ವಹಿಸಲು ಸುಲಭವಾಗುವುದೆಂದು ಭಾವಿಸಿದ್ದೇನೆ. ಈ ರಾಜ್ಯದ ಅಭಿವೃದ್ಧಿ ದೃಷ್ಟಿಯಿಂದ ಎಲ್ಲಾ ಸದಸ್ಯರು ಚರ್ಚೆಗಳಲ್ಲಿ ಭಾಗಿಯಾಗಿ, ಸಾರ್ವಜನಿಕ ಮಹತ್ವದ ಕಾರ್ಯಗಳನ್ನು ಕೈಗೊಳ್ಳಲು ಸಹಕರಿಸಬೇಕೆಂದು ಕೋರುತ್ತೇನೆ. ಈ ಸದನದಲ್ಲಿ ಸುಮಾರು 67 ಮಂದಿ ಶಾಸಕರು ಪ್ರಥಮ ಬಾರಿಗೆ ಆಯ್ಕೆಯಾಗಿ ಬಂದಿದ್ದಾರೆ. ಅವರುಗಳಿಗೆ ಸೂಕ್ತ ರೀತಿಯಲ್ಲಿ ತರಬೇತಿ ಕಾರ್ಯಕ್ರಮವನ್ನು ಏರ್ಪಡಿಸಬೇಕೆಂಬ ಅಭಿಪ್ರಾಯವನ್ನು ಹೊಂದಿರುತ್ತೇನೆ. ಈ ಶಾಸಕಾಂಗ ಸಭೆಯ ಎಲ್ಲಾ ಪಕ್ಷದ ಸದಸ್ಯರುಗಳು ಚರ್ಚೆಯಲ್ಲಿ ಭಾಗವಹಿಸಲು ಪಕ್ಷಪಾತವಿಲ್ಲದ ಸಮಾನವಾದ ಅವಕಾಶವನ್ನು ಒದಗಿಸಿಕೊಟ್ಟು ತನ್ಮೂಲಕ ರಾಜ್ಯದ ಎಲ್ಲಾ ಜನರಿಗೆ ಹಾಗೂ ಸಮರ್ಪಕವಾಗಿ ಕ್ಷೇತ್ರದ ಸಮಸ್ಯೆಗಳನ್ನು ಬಗೆಹರಿಸಲು ಅನುವು ಮಾಡಿಕೊಡುತ್ತೇನೆಂದು ಈ ಸದನಕ್ಕೆ ಭರವಸೆ ನೀಡಬಯಸುತ್ತೇನೆ. ಈ ಸಂದರ್ಭದಲ್ಲಿ ಮಾಧ್ಯಮ ಮಿತ್ರರಲ್ಲಿ ಸಭಾಧ್ಯಕ್ಷನಾಗಿ ವಿನಂತಿಸುವುದೇನೆಂದರೆ ಈ ಒಂದು ಸದನದಲ್ಲಿ ಗಂಭೀರವಾದ ಚರ್ಚೆಗಳಿಗೆ ತಾವು ಪ್ರಾಮುಖ್ಯತೆಯನ್ನು ಕೊಡಬೇಕೆಂದು ಎಲ್ಲಾ ಶಾಸಕರ ಪರವಾಗಿ

ಕೇಳಿಕೊಳ್ಳುತ್ತೇನೆ. ಇದುವರೆವಿಗೂ ನನ್ನ ಬಗ್ಗೆ ಮಾನ್ಯ ಸದಸ್ಯರುಗಳು ವ್ಯಕ್ತಪಡಿಸಿರುವ ಸದಾಭಿಪ್ರಾಯಗಳಿಗೆ ನನ್ನ ಧನ್ಯವಾದಗಳನ್ನು ತಿಳಿಸುತ್ತಾ, ಈ ಸಭೆಯ ಮಾನ್ಯ ಸದಸ್ಯರುಗಳ ಸಂಪೂರ್ಣ ಸಹಕಾರವನ್ನು ಕೋರುತ್ತಾ, ತಮ್ಮೆಲ್ಲರಿಗೂ ವಂದಿಸುತ್ತೇನೆ. ಇದರೊಂದಿಗೆ ನಾನು ಎರಡು ಮಾತುಗಳನ್ನು ಸೇರಿಸುವುದಕ್ಕೆ ಇಷ್ಟಪಡುತ್ತೇನೆ.

ಮಾನ್ಯ ವಿರೋಧ ಪಕ್ಷದ ನಾಯಕರು ಇಲ್ಲೇ ಇದ್ದಾರೆ. ನಾನು ಮೊದಲ ಬಾರಿಗೆ ಶಾಸನ ಸಭೆಯನ್ನು ಪ್ರವೇಶ ಮಾಡಿದಾಗ, ಮಾನ್ಯ ರೇವಣ್ಣ ನವರು ಕುಳಿತಿರುವ ಸ್ಥಳದಲ್ಲಿ ನಾನು ಕುಳಿತಿದ್ದೆ. ಮಾನ್ಯ ಹೆಚ್.ಡಿ. ದೇವೇಗೌಡರು ನಿಮ್ಮ ಸ್ಥಾನದಲ್ಲಿ ಅಂದರೆ ವಿರೋಧ ಪಕ್ಷ ಸ್ಥಾನದಲ್ಲಿ ಕುಳಿತಿದ್ದರು. ಅಂದು ತಂದೆ, ಇಂದು ಮಗ, ನಾನು ಆಕಸ್ಮಿಕವಾಗಿ ಈ ಅಧ್ಯಕ್ಷ ಸ್ಥಾನದಲ್ಲಿ ಕುಳಿತಿದ್ದೇನೆ. ನನ್ನ ವಿಶ್ವಾಸಿಗಳು ಹಾಗೂ ನನ್ನ ಪ್ರಿಯ ಸ್ನೇಹಿತರು ಇಂದು ಮುಖ್ಯಮಂತ್ರಿಗಳಾಗಿದ್ದಾರೆ. ಅವರ ನಾಯಕತ್ವದಲ್ಲಿ ಮುಂದಿನ ದಿನಗಳಲ್ಲಿ ಒಳ್ಳೆಯ ಸರ್ಕಾರ ನಡೆಯುತ್ತದೆ. ಈ ಸದನದಲ್ಲಿ ಯಶಸ್ವಿಯಾಗಿ ನಡೆಸಬೇಕೆಂಬ ಅಪೇಕ್ಷೆ ನನಗೆ ಇದೆ. ತಾವುಗಳೆಲ್ಲರೂ ಹೇಳಿದ ಮಾತುಗಳನ್ನು ನಾನು ಕೇಳಿದ್ದೇನೆ. ಇಷ್ಟೊಂದು ನನ್ನನ್ನು ಏಕೆ ಹೊಗಳಿಸಿಕೊಳ್ಳಬೇಕೆಂದು ಒಂದೊಂದು ಸಾರಿ ನನಗೆ ದುಃಖ ಬರುತ್ತದೆ. ಆದರೆ ಕೊಟ್ಟ ಜವಾಬ್ದಾರಿಯನ್ನು ನಿರ್ವಹಿಸಬೇಕೆಂಬ ಸಂಕಲ್ಪ ನನಗೆ ಇದೆ. ತಪ್ಪದೇ ನಾನು ಆ ಸಂಕಲ್ಪವನ್ನು ನೆರವೇರಿಸಿಕೊಡುತ್ತೇನೆಂಬ ಭರವಸೆಯನ್ನು ಈ ಸಂದರ್ಭದಲ್ಲಿ ಕೊಡುವುದಕ್ಕೆ ಇಷ್ಟಪಡುತ್ತೇನೆ. ನಾವು, ನಿವೆಲ್ಲಾ ಸೇರಿ ಹೊಸ ಅನುಭವವನ್ನು ಪಡೆಯುವ ಪ್ರಯತ್ನವನ್ನು ಮಾಡೋಣ. ಹೊಸ ಸದಸ್ಯರಿದ್ದಾರೆ, ಹಳೆಯ ಸದಸ್ಯರಿದ್ದಾರೆ, ಹಳೆಯ ಸದಸ್ಯರು ತಮ್ಮ ಅನುಭವವನ್ನು ಧಾರೆಯೆರೆಯಬೇಕು. ಹೊಸ ಸದಸ್ಯರು ಅವರ ಅನುಭವವನ್ನು ಸ್ವೀಕಾರ ಮಾಡಬೇಕು, ಹೀಗೆ ಸಮನ್ವಯದಿಂದ ಸಾಧನೆಯನ್ನು ಮಾಡುವುದಕ್ಕೆ ಸಾಧ್ಯವಿದೆ. ತಾವೆಲ್ಲಾ ವ್ಯಕ್ತಪಡಿಸಿರುವ ಅಭಿಪ್ರಾಯಗಳನ್ನು ಗಮನದಲ್ಲಿಟ್ಟುಕೊಂಡು, ನಿಜವಾಗಿಯೂ ಜನ ಮೆಚ್ಚುವ, ರಾಷ್ಟ್ರ ಮೆಚ್ಚುವ, ಸಂಸದೀಯ ವ್ಯವಸ್ಥೆ ಮೆಚ್ಚುವ, ಕಾರ್ಯಕ್ರಮಗಳನ್ನು ಮುಂದಿನ ದಿನಗಳಲ್ಲಿ ಖಂಡಿತವಾಗಿಯೂ ಮಾಡೋಣ. ಸದನವು ಹೆಚ್ಚು ದಿವಸ ನಡೆಯಬೇಕೆಂಬ ನನ್ನ ಅಭಿಪ್ರಾಯವನ್ನು ತಾವುಗಳೆಲ್ಲಾ ಸೇರಿ ಏನು ತೀರ್ಮಾನ ಮಾಡುತ್ತೀರೋ ಅದಕ್ಕೆ ನಾನು ಸಂಪೂರ್ಣ ಬದ್ಧನಾಗಿರುತ್ತೇನೆ. ಆದ್ದರಿಮದ ಹೆಚ್ಚು ದಿನಗಳ ಕಾಲ ಕಲಾಪ ನಡೆಯಬೇಕು, ಸದನದಲ್ಲಿ ಹೆಚ್ಚು ಚರ್ಚೆಯಾಗಬೇಕು. ನಮ್ಮ ಗುರುಗಳು ನಮಗೆ ಹೇಳಿ

ಕೊಟ್ಟಿರುವುದೇನೆಂದರೆ, ಈ ಶಾಸನ ಸಭೆಗಳು ಜನರ ಕೈಗನ್ನಡಿ ಇದ್ದ ಹಾಗೆ. ಇಲ್ಲಿ ಸಮಸ್ಯೆಗಳು ಹೆಚ್ಚು ಚರ್ಚೆಯಾದರೆ, ಜನರಿಗೆ ಗೊತ್ತಾಗುತ್ತದೆ. ಆದ್ದರಿಂದ ಸಮಸ್ಯೆಗಳಿಗೆ ಪರಿಹಾರ ಹಾಗೂ ಚರ್ಚೆ ಮಾಡುವುದಕ್ಕೆ ಉತ್ತಮವಾದ ಸ್ಥಾನವೇ ಶಾಸನಸಬೆ. ಈ ಶಾಸನ ಸಭೆಯನ್ನು ಜನರ ಕೈಗನ್ನಡಿಯಾಗಿ ಮಾಡುವುದಕ್ಕೆ ನಾವು–ನೀವೆಲ್ಲರೂ ಸೇರಿ ಪ್ರಯತ್ನ ಮಾಡೋಣ ಎಂದು ಹೇಳಿ, ಮತ್ತೊಮ್ಮೆ ತಮಗೆಲ್ಲಾ ಸಾಷ್ಟಾಂಗಪೂರಕವಾದಂತಹ ಅಭಿನಂದನೆಯನ್ನು, ಕೃತಜ್ಞತೆಯನ್ನು ಈ ಸಂದರ್ಭದಲ್ಲಿ ಸಲ್ಲಿಸುತ್ತಿದ್ದೇನೆ.

ಈಗ ಸದನವನ್ನು ಸೋಮವಾರ ಬೆಳಿಗ್ಗೆ 11.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವನ್ನು ಮಧ್ಯಾಹ್ನ 2 ಗಂಟೆ 25 ನಿಮಿಷಕ್ಕೆ ಮುಂದೂಡಲಾಯಿತು. ಸದನವು ಪುನಃ ದಿನಾಂಕ 3ನೇ ಜೂನ್, 2013 ರ ಸೋಮವಾರದಂದು ಬೆಳಿಗ್ಗೆ 11.00 ಗಂಟೆಗೆ ಸೇರಲು ನಿಶ್ಚಯಿಸಿತು).